# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

# ರಾಜ್ಯ ಮಟ್ಟದ ವಿವಿಧ ಸ್ಪರ್ಧೆಗಳ ಆಯೋಜನೆಗೆ ಮಾರ್ಗಸೂಚಿ

## 1. ರಾಜ್ಯ ಮಟ್ಟದ ನಾಟಕ ಸ್ಪರ್ಧೆ

**ವಿಷಯ** :

- ಆಹಾರ ಭದ್ರತೆ & ಪೋಷಣೆ
- ಹಸಿರು ಇಂಧನ / ವಿದ್ಯುತ್
- ಡಿಜಿಟಲ್ ಭಾರತ : ಸಬಲೀಕರಣಕ್ಕೆ ಶಕ್ತಿ
- ಪ್ರಖ್ಯಾತ ವಿಜ್ಞಾನಿಯ ಜೀವನ ಮತ್ತು ಸಂಶೋಧನೆಗಳು
- ಸ್ವಚ್ಛ ಭಾರತ : ಆರೋಗ್ಯ ಭಾರತ
- ಮೇಕ್ ಇನ್ ಇಂಡಿಯಾ

i. **ನಾಟಕ ತಂಡದ ಗಾತ್ರ** : ಒಂದು ತಂಡದಲ್ಲಿ ಗರಿಷ್ಠ ೮ ವಿದ್ಯಾರ್ಥಿಗಳು (ಪಾತ್ರಧಾರಿಗಳು)

ii. **ಮಾರ್ಗದರ್ಶಕರು / ನಿರ್ದೇಶಕರು** : ಒಬ್ಬರು

iii. **ಭಾಷೆ** : ಕನ್ನಡ

iv. **ಸಾಹಿತ್ಯ** : ನಾಟಕವು ಮೇಲ್ಕಂಡ ಯಾವುದಾದರು ಒಂದು ಉಪ ವಿಷಯವನ್ನು ಆಯ್ಕೆ ಮಾಡಿಕೊಂಡು ವೈಜ್ಞಾನಿಕ ಸಂದೇಶವನ್ನು ಸಮಾಜಕ್ಕೆ ನೀಡುವಂತಿರಬೇಕು. ನಾಟಕದ ಸಾಹಿತ್ಯವನ್ನು ಆಯೋಜಕರಿಗೆ ಮೊದಲೇ ಕಳುಹಿಸಿಕೊಟ್ಟು ಅನುಮೋದನೆ ಪಡೆಯುವುದು.

v. **ನಿರ್ಮಾಣ** : ನಾಟಕವನ್ನು ವಿದ್ಯಾರ್ಥಿಗಳೇ ರಚಿಸಿ, ಸಾಹಿತ್ಯ ಬರೆದು, ನಿರ್ದೇಶನ ಮಾಡಿ ನಟಿಸಬೇಕು. ಉಪನ್ಯಾಸಕರು ಸಾಹಿತ್ಯ ರಚನೆ ಮತ್ತು ನಿರ್ದೇಶನಕ್ಕೆ ಪೂರ್ವಾಭ್ಯಾಸದ ವೇಳೆ ನೆರವು ನೀಡಬಹುದಾಗಿದೆ.

vi. **ಅವಧಿ** : ನಾಟಕವನ್ನು ೩೦ ನಿಮಿಷದೊಳಗೆ ಸಂಪೂರ್ಣಗೊಳಿಸಬೇಕಾಗುವುದು.

vii. **ವಸ್ತ್ರ / ವೇಷ ಭೂಷಣ** : ನಾಟಕದಲ್ಲಿ ವಿಶೇಷ ವಸ್ತ್ರ ವಿನ್ಯಾಸ, ಬೆಳಕು, ಹಿನ್ನೆಲೆ ಸಂಗೀತ, ನೃತ್ಯ, ಮೂಕಾಭಿನಯ ಅಥವಾ ಇನ್ನಿತರೇ ಅಗತ್ಯ ಅಂಶಗಳನ್ನು ಅಳವಡಿಸಿಕೊಳ್ಳಬಹುದಾಗಿದ್ದು, ವೈಜ್ಞಾನಿಕ ಸಂದೇಶವನ್ನು ನೀಡುವಂತಿರಬೇಕು. ಆದರೆ, ಅಂತಹ ಅಗತ್ಯವಾದ ಪರಿಕರಗಳನ್ನು ಆಯಾ ತಂಡಗಳೇ ಏರ್ಪಡಿಸಿಕೊಳ್ಳಬೇಕಾಗುತ್ತದೆ.

viii. **ವೇದಿಕೆಯನ್ನು ಸಜ್ಜುಗೊಳಿಸುವುದು** : ವೇದಿಕೆಯನ್ನು ಆಯಾ ತಂಡಗಳೇ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಗೊಳಿಸಿ, ಅಲಂಕರಿಸುವುದು.

ix. **ತೀರ್ಪು (100 ಅಂಕಗಳು)**

ಪ್ರತಿ ನಾಟಕದ (ಸಾಹಿತ್ಯ, ನಿರ್ದೇಶನ, ತಂಡದ ಪ್ರದರ್ಶನ ಹಾಗೂ ವೈಯಕ್ತಿಕ ಪ್ರದರ್ಶನ) ಮೌಲ್ಯಮಾಪನವನ್ನು ನುರಿತ ತೀರ್ಪುಗಾರರಿಂದ/ತಜ್ಞರಿಂದ ಮಾಡಿಸಲಾಗುವುದು. ಮೌಲ್ಯಮಾಪನವನ್ನು ಕೆಳಕಂಡ ಅಂಶಗಳ ಆಧಾರದ ಮೇಲೆ ಮಾಡಲಾಗುವುದು :

ಅ) ವೈಜ್ಞಾನಿಕ ವಿಷಯ – 30

ಆ) ಪ್ರಸ್ತುತಿ – 50

ಇ) ಪರಿಣಾಮ – 20

x. **ಬಹುಮಾನಗಳು** : ಬಹುಮಾನಗಳನ್ನು ತೀರ್ಪುಗಾರರ ಮೌಲ್ಯಮಾಪನದ ಆಧಾರದ ಅನ್ವಯ ಕೆಳಕಂಡಂತೆ ನೀಡಲಾಗುವುದು :

- **ಅತ್ಯುತ್ತಮ ನಾಟಕ** :
  - ✓ ಮೊದಲನೇ ಬಹುಮಾನ – ರೂ. 10,000/-
  - ✓ ಎರಡನೇ ಬಹುಮಾನ – ರೂ. 7,500/-
  - ✓ ಮೂರನೇ ಬಹುಮಾನ – ರೂ. 5,000/-
  - ✓ ಸಮಾಧಾನಕರ ಬಹುಮಾನ – ರೂ. 2,000/- (2)
- **ಅತ್ಯುತ್ತಮ ನಿರ್ದೇಶನ** :
  - ✓ ಮೊದಲನೇ ಬಹುಮಾನ – ರೂ. 5,000/-
  - ✓ ಎರಡನೇ ಬಹುಮಾನ – ರೂ. 4,000/-
  - ✓ ಮೂರನೇ ಬಹುಮಾನ – ರೂ. 3,000/-
  - ✓ ಸಮಾಧಾನಕರ ಬಹುಮಾನ – ರೂ. 2,000/- (2)
- **ಅತ್ಯುತ್ತಮ ಪಾತ್ರಧಾರಿ** :
  - ✓ ಮೊದಲನೇ ಬಹುಮಾನ – ರೂ. 5,000/-
  - ✓ ಎರಡನೇ ಬಹುಮಾನ – ರೂ. 4,000/-
  - ✓ ಮೂರನೇ ಬಹುಮಾನ – ರೂ. 3,000/-
  - ✓ ಸಮಾಧಾನಕರ ಬಹುಮಾನ – ರೂ. 2,000/- (2)
- **ಅತ್ಯುತ್ತಮ ಸಾಹಿತ್ಯ** :
  - ✓ ಮೊದಲನೇ ಬಹುಮಾನ – ರೂ. 5,000/-
  - ✓ ಎರಡನೇ ಬಹುಮಾನ – ರೂ. 4,000/-
  - ✓ ಮೂರನೇ ಬಹುಮಾನ – ರೂ. 3,000/-
  - ✓ ಸಮಾಧಾನಕರ ಬಹುಮಾನ – ರೂ. 2,000/- (2)

## 2. ರಾಜ್ಯ ಮಟ್ಟದ ಗಣಿತ ಸ್ಪರ್ಧೆ :

- **ಗಣಿತ ರಸಪ್ರಶ್ನೆ ಸ್ಪರ್ಧೆ**: ಗಣಿತ ಮತ್ತು ಖಗೋಳಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಲಿಖಿತ ಅಥವಾ ಮೌಖಿಕ ರೂಪದಲ್ಲಿ ಕೇಳಲಾಗುವುದು. ಈ ಕೆಳಕಂಡಂತೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು :

  - ✓ ಮೊದಲನೇ ಬಹುಮಾನ - ರೂ. 10,000/-
  - ✓ ಎರಡನೇ ಬಹುಮಾನ - ರೂ. 7,500/-
  - ✓ ಮೂರನೇ ಬಹುಮಾನ - ರೂ. 5,000/-
  - ✓ ಸಮಾಧಾನಕರ ಬಹುಮಾನ - ರೂ. 2,000/- (2)

- **ಗಣಿತ ಮಾಡಲಿಂಗ್ ಸ್ಪರ್ಧೆ** : ವಿದ್ಯಾರ್ಥಿಗಳು ಗಣಿತಕ್ಕೆ ಸಂಬಂಧಿಸಿದ ಮಾಡಲ್‌ನ್ನು ಪ್ರದರ್ಶಿಸುವುದು. ಆಯ್ಕೆಯಾದ ಮಾಡಲ್‌ಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ಕೆಳಕಂಡಂತೆ ನೀಡಲಾಗುವುದು :

  - ✓ ಮೊದಲನೇ ಬಹುಮಾನ - ರೂ. 10,000/-
  - ✓ ಎರಡನೇ ಬಹುಮಾನ - ರೂ. 7,500/-
  - ✓ ಮೂರನೇ ಬಹುಮಾನ - ರೂ. 5,000/-
  - ✓ ಸಮಾಧಾನಕರ ಬಹುಮಾನ - ರೂ. 2,000/- (2)

## 3. ರಾಜ್ಯ ಮಟ್ಟದ ಚಿತ್ರಕಲೆ ಸ್ಪರ್ಧೆ

**ವಿಷಯಗಳು** :

- ಸ್ಮಾರ್ಟ್ ವಿಲೇಜ್ ಪರಿಕಲ್ಪನೆ
- ಸುಸ್ಥಿರ ಕೃಷಿ ಮತ್ತು ಆಹಾರ ಭದ್ರತೆ
- ಸಂಪನ್ಮೂಲಗಳ ಪುನರ್ ಬಳಕೆ ಮತ್ತು ಮರು ಬಳಕೆ
- ಪರಿಸರ ಸಂರಕ್ಷಣೆಗೆ ಸುಸ್ಥಿರ ತಂತ್ರಜ್ಞಾನ
- ಸುಸ್ಥಿರ ಸಮೂಹ ಸಾರಿಗೆ
- ಹವಾಮಾನ ಬದಲಾವಣೆ ಮತ್ತು ನೈಸರ್ಗಿಕ ವಿಕೋಪಕಗಳು

i. **ಸೂಚನೆಗಳು :**

- ಡ್ರಾಯಿಂಗ್ ಶೀಟ್ ಒದಗಿಸಲಾಗುವುದು.
- ಪೈಂಟಿಂಗ್‌ಗೆ ಅಗತ್ಯವಾದ ಪರಿಕರಗಳನ್ನು ತರುವುದು.
- ಸಮಯ : 75 ನಿಮಿಷಗಳು.

ii. **ತೀರ್ಪು (100 ಅಂಕಗಳು) :**

ಚಿತ್ರಕಲೆ / ಪೈಂಟಿಂಗ್ ಅನ್ನು ಕೆಳಕಂಡ 5 ಅಂಶಗಳ (ತಲಾ 20 ಅಂಕಗಳು) ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು :

- ಸೃಜನಾತ್ಮಕತೆ ಮತ್ತು ಸ್ವಂತಿಕೆ
- ಕೇಂದ್ರ ವಿಷಯಕ್ಕೆ ಸಂಬಂಧಿಸಿದ ಕಲಾತ್ಮಕ ಪ್ರಸ್ತುತಿ
- ಉತ್ತಮ ಬಣ್ಣ ಸಂಯೋಜನೆ
- ಅಚ್ಚುಕಟ್ಟು ಮತ್ತು ಉತ್ತಮ ವಿನ್ಯಾಸ
- ಸೂಕ್ತವಾಗಿ ಪೈಂಟೆಂಗ್ ಪೂರ್ಣಗೊಳಿಸುವ್ಯದು

**ಬಹುಮಾನಗಳು** :

- ✓ ಮೊದಲನೇ ಬಹುಮಾನ – ರೂ. 10,000/-
- ✓ ಎರಡನೇ ಬಹುಮಾನ – ರೂ. 7,500/-
- ✓ ತೃತೀಯ ಬಹುಮಾನ – ರೂ. 5,000/-
- ✓ ಸಮಾಧಾನಕರ ಬಹುಮಾನ – ರೂ. 4,000/- (2)

## 4. ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ

- ಸ್ಪರ್ಧೆಗೆ 05 ದಿನಗಳ ಮೊದಲು ಅಕಾಡೆಮಿಯು ಒಂದು ಕೇಂದ್ರ ವಿಷಯವನ್ನು ಪ್ರಕಟಿಸುವುದು. ಈ ವಿಷಯದಲ್ಲಿ ವಿದ್ಯಾರ್ಥಿಯು ಪ್ರಬಂಧವನ್ನು ಬರೆಯಬೇಕಾಗುವುದು. ಪ್ರಬಂಧವನ್ನು ಪರಿಣತರಿಂದ ಈ ಕೆಳಕಂಡ ಅಂಶಗಳ ಮೇಲೆ ಮೌಲ್ಯಮಾಪನ ಮಾಡಿಸಲಾಗುವುದು :

| ಗಮನಿಸಬೇಕಾದ ಅಂಶಗಳು | ಅಂಕಗಳು |
|---|---|
| **ವಿಷಯ ಪ್ರಸ್ತುತತೆ (Relevance to the subject)** –ಕೇಂದ್ರ ವಿಷಯಕ್ಕೆ ಸಂಬಂಧಿಸಿದೆಯೇ, ವಿಷಯ ಜ್ಞಾನ ಮತ್ತು ಜ್ಞಾನದ ಆಳ, ಸಂಕ್ಷಿಪ್ತತೆ ಮತ್ತು ಸಂದೇಶದ ಸ್ಪಷ್ಟತೆ, ಮೂಲ ರೂಪ, ವೈಯಕ್ತಿಕ ಉಲ್ಲೇಖಗಳ ಸಂಯೋಜನೆ, ಇತ್ಯಾದಿ | 35 |
| **ಬರವಣಿಗೆಯ ಕೌಶಲ್ಯ (Writing skills)** – ಪದಗಳು, ವಾಕ್ಯಗಳು, ವ್ಯಾಕರಣಗಳ ಉಪಯೋಗ ಮತ್ತು ಪ್ರಸ್ತುತಿ, ಸೃಜನಾತ್ಮಕತೆ, ನಿಖರತೆ, ಇತ್ಯಾದಿ) | 35 |
| **ವಿಷಯ ಮಂಡನೆ (Presentation of subject)** – ಪ್ರಬಂಧದ ಆಯೋಜನೆ, ವಿಷಯ ಪ್ರಸ್ತುತಿಯಲ್ಲಿ ತಮ್ಮ ನಿಲುವನ್ನು ಬೆಂಬಲಿಸುವ ರೀತಿ, ಪ್ರಮುಖ ಪರಿಕಲ್ಪನೆ ಮತ್ತು ತಮ್ಮ ನಿಲುವನ್ನು ಪ್ರಬಂಧದ ಉದ್ದಕ್ಕೂ ಅಭಿವೃದ್ಧಿಪಡಿಸುವ ರೀತಿ, ಇತ್ಯಾದಿ | 20 |
| **ಅಂತಿಮ ತೀರ್ಮಾನ (Conclusion)** | 10 |

- ಬಹುಮಾನಗಳು : ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಬಹುಮಾನವನ್ನು ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು:

**ಪದವಿ ವಿಜ್ಞಾನ ವಿದ್ಯಾರ್ಥಿಗಳು**

✓ಮೊದಲನೆಯ ಬಹುಮಾನ – ರೂ. 10,000/-
✓ಎರಡನೆಯ ಬಹುಮಾನ – ರೂ. 7,500/
✓ತೃತೀಯ ಬಹುಮಾನ – ರೂ. 5,000/-
✓ಸಮಾಧಾನಕರ ಬಹುಮಾನ – ರೂ. 2,000/- (2)

**ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು**

✓ಮೊದಲನೆಯ ಬಹುಮಾನ – ರೂ. 10,000/-
✓ಎರಡನೆಯ ಬಹುಮಾನ – ರೂ. 7,500/
✓ತೃತೀಯ ಬಹುಮಾನ – ರೂ. 5,000/-
✓ಸಮಾಧಾನಕರ ಬಹುಮಾನ 1 – ರೂ. 2,000/- (2)